

## ಅಭಿನಂದನೆಗಳು ಸೂರ್ಯಕಾಂತ್

ಈತ ನೋಡಲು ಸಾಮಾನ್ಯರಲ್ಲಿ ಸಾಮಾನ್ಯರಂತೆ ಕಾಣುತ್ತಾರೆ. ಆದರೆ ವೇದಿಕೆಯ ಮೇಲೆ ನಿಂತು ಹಾಡುವುದನ್ನು ಕೇಳಿದರೆ ಅಸಾಮಾನ್ಯ ಎಂದು ಅನಿಸುತ್ತದೆ. ಈತ ಮಾತನಾಡಲು ಪ್ರಯಾಸಪಡುವುದನ್ನು ನೋಡಿದಾಗ ಮಾತು ನಿಲ್ಲಿಸಬಾರದೆ ಎನಿಸುವುದು. ಹಾಡಲು ಪ್ರಾರಂಭಿಸಿದರೆ ಇನ್ನೂ ಹಾಡುತ್ತಿರಬಾರದೆ ಎನ್ನುವ ಮನಸ್ಸು ನಮ್ಮದಾಗುವುದು. ವೇದಿಕೆ ಹತ್ತಿನಿಂತು ಹಾಡುವಾಗ ವಾಮನ ತ್ರಿವಿಕ್ರಮನಾಗಿ ಬೆಳೆದಂತೆ ಕಾಣುತ್ತಾರೆ. ಇಷ್ಟೆಲ್ಲಾ ವಿವರಣೆ ಯಾರ ಬಗ್ಗೆ ಬರೆದಿರಬಹುದು ಎಂದು ಊಹಿಸಿದಿರಾ? ಆತ ಕಲರ್ಸ್ ಕನ್ನಡದ 'ಎದೆ ತುಂಬಿ ಹಾಡುವೆನು' ಸ್ಪರ್ಧಿ ಸೂರ್ಯಕಾಂತ್.

ತನ್ನ ಊರಿಗೆ ಬಸ್ಸಿನ ಸೌಕರ್ಯವೂ ಇಲ್ಲದ ಕುಗ್ರಾಮ ತನ್ನದು ಎಂದು ತಿಳಿಸಿದರು. ಈಗ ಸರ್ಕಾರ ಆ ಗ್ರಾಮಕ್ಕೆ ಬಸ್ಸಿನ ಸೌಲಭ್ಯ ಒದಗಿಸಿದೆ. ಆ ಗ್ರಾಮಸ್ಥರಿಗೆ ಬಸ್ಸಿನ ಸೌಕರ್ಯ ಒದಗುವಂತೆ ಮಾಡಿದ ಸೂರ್ಯಕಾಂತ್‌ಗೆ ಅಭಿನಂದನೆಗಳು.

—ಕೆ.ಎಸ್. ಸವಿತ, ಬೆಂಗಳೂರು

## ಅಚ್ಚಕನ್ನಡದಲ್ಲಿರಲಿ

ವಾರಾಂತ್ಯದಲ್ಲಿ ಪ್ರಸಾರವಾಗುತ್ತಿರುವ 'ಎದೆ ತುಂಬಿ ಹಾಡುವೆನು'ದಲ್ಲಿ ಉತ್ತರ ಕರ್ನಾಟಕದ ಗ್ರಾಮೀಣ ಪ್ರತಿಭೆಗಳ ಸಂಗೀತಗಾನ ಅತ್ಯುತ್ತಮವಾಗಿದೆ. ಅವರನ್ನು ಹುಡುಕಿ ಕಾರ್ಯಕ್ರಮಕ್ಕೆ ಪರಿಚಯ ಮಾಡಿದ ಕಲರ್ಸ್ ಕನ್ನಡಕ್ಕೆ ಧನ್ಯವಾದಗಳು. ಆದರೆ ಇಲ್ಲಿ ಇಂಗ್ಲಿಷ್ ಪದಗಳ ಅತಿ ಬಳಕೆ ಕಾರ್ಯಕ್ರಮದ ಒಟ್ಟು ಅಂದವನ್ನು ಕಡೆಸುತ್ತದೆ ಎಂದು ಎನ್ನಿಸುತ್ತಿದೆ. ಎಲ್ಲ ತೀರ್ಪುಗಾರರು ಅಚ್ಚ ಮತ್ತು ಸ್ವಚ್ಛ ಕನ್ನಡದಲ್ಲಿ ಮಾತನಾಡಿದರೆ ಕಾರ್ಯಕ್ರಮಕ್ಕೆ ತುಂಬಾ ಕಳೆ ಬರುತ್ತೆ.

—ಕಮಲಾದೇವಿ ರಾಜಶೇಖರ್ ಹಳ್ಳೂರ್, ಬೆಂಗಳೂರು

## ಭಗವಂತನೊಟ್ಟಿಗಿನ ನಂಟು...

ಕಲರ್ಸ್ ಕನ್ನಡದ 'ಎದೆ ತುಂಬಿ ಹಾಡುವೆನು' ಸ್ಪರ್ಧಿಗಳ ಹಾಡುಗಾರಿಕೆಯ ಬಗ್ಗೆ ತೀರ್ಪುಗಾರರು ನೀಡುವ ಟಿಪ್ಪಣಿ ಸಹಜ. ಆದರೆ ಇತ್ತೀಚೆಗೆ ಕಲ್ಬುರ್ಗಿಯ ಯುವಕ 'ಸೂರ್ಯಕಾಂತ' ಅವರ ವಿಚಾರದಲ್ಲಿ ಅದನ್ನು ಮೀರಿತ್ತು. ರಾಜೇಶ್ ಕೃಷ್ಣನ್ ಅವರ ಅಂತರಾಳದ ಮಾತುಗಳು, ಹಾಡುಗಾರಿಕೆಯ ಬಗ್ಗೆ ವಿವರಣೆ ಸ್ಪರ್ಧಿಯನ್ನು ಮಾತ್ರವಲ್ಲ ವೀಕ್ಷಕರನ್ನೆಲ್ಲ ಮೂಕವಿಸ್ಮಿತರನ್ನಾಗಿಸಿತ್ತು.

ದುರದೃಷ್ಟವಶಾತ್, ಈ ಸ್ಪರ್ಧಿಗೆ ಉಗ್ಗುಮಾತಿನ ಸಮಸ್ಯೆ ಇದ್ದರೂ ಗಾಯನದಲ್ಲಿ ಅದು ಬಿಲ್ ಕುಲ್ ಅಡಚಣೆ ಉಂಟುಮಾಡದೇ ಇರುವುದನ್ನು ಗಮನಿಸಿದರೆ ಭಗವಂತ ನಮ್ಮಿಂದ ಒಂದನ್ನು ಕಸಿದುಕೊಂಡರೆ ಮತ್ತಾವುದೋ ಅವಕಾಶವನ್ನು ನೀಡೇ ನೀಡುತ್ತಾನೆ ಎಂಬುದಕ್ಕೆ ಸೂರ್ಯಕಾಂತ್ ಸಾಕ್ಷಿ. ಅದನ್ನೇ ಡಿವಿಜಿ ಮಂಕುತಿಮ್ಮನ ಕಗ್ಗದಲ್ಲಿ ಹೀಗೆ ವಿವರಿಸಿರುತ್ತಾರೆ... ತರಣಿ ಕಿರಣದ ನಂಟು, ಗಗನ ಸಲಿಲದ ನಂಟು/ ಧರಣಿ ಚಲನೆಯ ನಂಟು ಮರುತನೊಳ್ನಂಟು/ ಪರಿಪರಿಯ ನಂಟುಗಳಿನೊಂದು ಗಂಟೇ ವಿಶ್ವ/ ಕಿರಿದು ಪಿರಿದೊಂದಂಟು– ಮಂಕುತಿಮ್ಮ.

ಅಂದರೆ, ಸೂರ್ಯನಿಗೂ ಕಿರಣಕ್ಕೂ ಒಂದು ನಂಟು ಇರುವಂತೆ, ಆಕಾಶಕ್ಕೂ ನೀರಿಗೂ ಉಂಟು. ಹಾಗೆಯೇ, ಭೂಮಿಗೂ ಚಲನೆಗೂ ನಂಟು ಉಂಟು. ಗಾಳಿಗೂ ಉಂಟು. ಈ ವಿಶ್ವವು ನಾನಾ ನಂಟುಗಳ ಗಂಟು ಆಗಿರುವುದು. ಗಾಯಕರಿಗೆ ಶುಭವಾಗಲಿ.

—ರಾಜೀವ್ ಎನ್. ಮಾಗಲ್, ಸಕಲೇಶಪುರ

ವಾರದ ಪತ್ರ

## ಸ್ಫೂರ್ತಿಯ ಮಹಾಪೂರ

ಮಹಿಳೆಯರಿಗಾಗಿ, ಮಹಿಳೆಯರಿಗೋಸ್ಕರವೇ ಪ್ರಸಾರವಾಗುತ್ತಿರುವ ಸ್ಟಾರ್ ಸುವರ್ಣದ 'ಸೂಪರ್ ಸ್ಟಾರ್' ಒಂದು ಅತ್ಯದ್ಭುತ ಕಾರ್ಯಕ್ರಮ ಎನ್ನುವುದರಲ್ಲಿ ಎರಡು ಮಾತಿಲ್ಲ. ನಾಲ್ಕು ಗೋಡೆಗಳ ಮಧ್ಯೆ ಕುಳಿತ ಹೆಂಗಳೆಯರನ್ನು ಹೊರಗಳೆದು, ಮುಖ್ಯವಾಹಿನಿಯ ಎದುರು ಪರಿಚಯಿಸಿ. ಗೆದ್ದವರಿಗೆ ಬಹುಮಾನಗಳ ಸುರಿಮಳೆಯನ್ನು ಹರಿಸುತ್ತಿರುವುದು ಸುಲಭದ ಮಾತೇನಲ್ಲ. ವಿಶೇಷ ಸಂಚಿಕೆಗಳಲ್ಲಿ ಅಸಹಾಯಕರಿಗೆ ಸಹಾಯ ಮಾಡುತ್ತಿರುವುದು ಅಭಿನಂದನೀಯ. ತಮ್ಮ ವಿಶೇಷ ಮಕ್ಕಳು ಸಮಾಜದಲ್ಲಿ ಎಲ್ಲರಂತೆ ಬಾಳಲು ಅಮ್ಮಂದಿರು ವಹಿಸಿದ ಮುತುವರ್ಜಿ, ಕಾಳಜಿ, ಕಷ್ಟಗಳ ಬಗ್ಗೆ ಹೇಳಿಕೊಳ್ಳುವಾಗ ಅವರ ಬಗ್ಗೆ ಹೆಮ್ಮೆಯಾಗುತ್ತದೆ. ಇವರ ಸಾಧನೆ ಎಲ್ಲರಿಗೂ ಸ್ಫೂರ್ತಿ ಉಂಟುಮಾಡುವುದರಲ್ಲಿ ಸಂಶಯವೇ ಇಲ್ಲ.

ಶಾಲಿನಿ ನಿರೂಪಣೆ, ಸ್ಪರ್ಧಿಗಳ ಸಂಗಾತಿಯ ಕಾಲೆಳೆಯುದರ ಜೊತೆಗೆ ಮನೆಗೆಲಸದಲ್ಲಿ ಸಹಾಯ ಮಾಡುವಂತೆ ನವಿರಾಗಿ ತಿಳಿ ಹೇಳುವ ರೀತಿಯಂತೂ ಅತ್ಯದ್ಭುತ.

—ಶ್ರುತಿ, ಬೆಂಗಳೂರು

## ಅಭಾಸ ಆಗಬಾರದು

ಸ್ಟಾರ್ ಸುವರ್ಣದ 'ಆಕಾಶದೀಪ'ದಲ್ಲಿ ಗಣೇಶಹಬ್ಬದ ದಿನ ಚೌತಿ ಚಂದ್ರನನ್ನು ಹುಣ್ಣಿಮೆ ಚಂದ್ರನಂತೆ ಗುಂಡಾಗಿ ತೋರಿಸಲಾಗಿದೆ. ಈ ರೀತಿಯ ತಪ್ಪುಗಳು ಮುಂದೆ ಸಂಭವಿಸದಿರಲಿ. ಚೌತಿಯ ದಿನ ಚಂದ್ರ ಬೆರಳಗಾತ್ರದಲ್ಲಿ ಇರುತ್ತದೆ. ಚತುರ್ದಶಿ ದಿನ ಮೈದುಂಬಿ ಪೂರ್ಣನಾಗುತ್ತಾನೆ. ಚಂದ್ರನ ಹತ್ತುದಿನದ ಬೆಳವಣಿಗೆಯನ್ನು ಮುಂಚೆಯೇ ತೋರಿಸುವುದು ಅವಾಸ್ತವ ಮಾತ್ರ ಅಲ್ಲ ಅಭಾಸ ಕೂಡ.

—ಉಷಾರಾಣಿ, ಬನಶಂಕರಿ

## ಗಾಯನ ಸ್ಪರ್ಧೆಯೋ ಲೋಕಾಭಿರಾಮವೋ

ಎಸ್.ಪಿ.ಬಿ. ನಿರೂಪಿಸಿದ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮ ಅನೇಕ ವರ್ಷಗಳ ಬಳಿಕ ಮತ್ತೆ ಶುರುವಾದದ್ದು ಸಂತೋಷ ಕೊಟ್ಟಿದೆ. ಎಲ್ಲರೂ ಬಹಳ ಚೆನ್ನಾಗಿ ಹಾಡುತ್ತಿದ್ದಾರೆ. ಮತ್ತೆ ಹಳೆ ಮೆರುಗನ್ನು ನೀಡಿದ ಕಲರ್ಸ್ ಕನ್ನಡಕ್ಕೆ ಧನ್ಯವಾದಗಳು.

ಒಂದೂವರೆ ಗಂಟೆ ಅವಧಿಯಲ್ಲಿ ನಾವು ಕೇಳುವುದು ಕೇವಲ ನಾಲ್ಕು ಹಾಡುಗಳನ್ನು ಮಾತ್ರ. ತೀರ್ಪುಗಾರರ, ನಿರೂಪಕಿಯ ಮಾತು, ಮಾತು... ಇದು ಬಹಳ ಬೇಸರವನ್ನುಂಟು ಮಾಡುತ್ತಿದೆ. ಸ್ಪರ್ಧಿಗಳಿಗೆ ಉತ್ತೇಜನ ನೀಡುವುದು ಸೂಕ್ತವೇ ಆದರೂ 'ಅತಿಯಾದರೆ ಅಮೃತವೂ ವಿಷವೇ' ಆಗುತ್ತದೆ ಎಂಬುದನ್ನು ಅವರು ಮರೆತಂತಿದೆ.

ಇಂತಿಷ್ಟು ಸಂಚಿಕೆಗಳು ಆಗಲೇಬೇಕೆಂಬ ಒತ್ತಡವೂ ಇದರ ಹಿಂದೆ ಇದೆಯೇನೋ? ಮಾತ್ರವಲ್ಲ ಇದು ರಾಜೇಶ್ ಕೃಷ್ಣನ್ ಅವರ ಸಂಗೀತ ಕಾರ್ಯಕ್ರಮವೋ ಎಂಬ ಸಂಶಯವೂ ಮೂಡುತ್ತಿದೆ. ಪ್ರತಿಸಂಚಿಕೆಯಲ್ಲಿಯೂ ಅವರ ಹಾಡು ಇರುತ್ತದೆ.

—ಪುಷ್ಪಾ ಎನ್.ಕೆ. ರಾವ್

## ಎಚ್ಚರ ಇರಲಿ

ಜನಪ್ರಿಯ ನಿರೂಪಕಿ ಶಾಲಿನಿ ಸ್ಟಾರ್ ಸುವರ್ಣದಲ್ಲಿ ನಡೆಸಿಕೊಡುತ್ತಿರುವ 'ಸೂಪರ್ ಸುವರ್ಣ' ಕಾರ್ಯಕ್ರಮದ ಸ್ಪರ್ಧಿಗಳಲ್ಲಿ ಹೆಚ್ಚಿನವರು ಮಧ್ಯವಯಸ್ಕರು. ಅವರಿಗೆ ಓಡಿ ಹೋಗಿ ಬಲೂನ್ ಒಡೆದು ಗುಲಾಬಿಯನ್ನು ಟೇಬಲ್ ಮೇಲೆ ಇಡುವ ಆಟ ಆಡಿಸುತ್ತಾರೆ. ನುಣುಪಾದ ನೆಲದಲ್ಲಿ ಓಡುವಾಗ ಜಾರಿ ಬೀಳುವ ಸಾಧ್ಯತೆ ಇರುತ್ತದೆ. ಸುರಕ್ಷತೆ ದೃಷ್ಟಿಯಿಂದ ಜಾರದಂತೆ ನೆಲದ ಮೇಲೆ ಮ್ಯಾಟ್ ಹಾಕಿದರೆ ಸಂಭವಿಸಬಹುದಾದ ಅಪಾಯ ತಪ್ಪಿಸಬಹುದು.

—ಎಂ.ಆರ್. ಚಂದ್ರಶೇಖರ್